File No.RDPR/268/SSK/2019-RDPR_SO_SERV_A-RDPR SEC

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವಸ್ಥಾಪಕರು (ತಾಂತ್ರಿಕ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,ಬೆಂಗಳೂರು ಇವರನ್ನು ಗುತ್ತಿಗೆ ಆಧಾರದ ಮೇಲೆ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ನೇಮಿಸುವ ಬಗ್ಗೆ.

ಓದಲಾಗಿದೆ:- ಕಾರ್ಯ ನಿರ್ವಾಹಕ ನಿರ್ದೇಶಕರು-1, ವ್ಯವಸ್ಥಾಪಕರು (ಸಿ&ಆ), ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ರವರ ಪತ್ರಸಂಖ್ಯೆ.ಕ.ರಾ.ಹ.ಸಂ./ ಪ್ರ.ಕ/ ಸಿಬ್ಬಂದಿ ಸಿಬ್ಬಂದಿ-1152 /2019-20 ದಿನಾಂಕ. 20.12.2019

### ಪ್ರಸ್ತಾವನೆ:

ಕಾರ್ಯನಿರ್ವಾಹಕ ನಿರ್ದೇಶಕರು, (ಸಿ&ಆ),ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಇವರು ಮೇಲೆ ಓದಲಾದ ದಿನಾಂಕ 20.12.2019 ರ ಪತ್ರದೊಂದಿಗೆ ನಿಯೋಜನೆಯ ಷರತ್ತು ಮತ್ತು ನಿಬಂಧನೆಗಳ ಪ್ರತಿಯನ್ನು ಲಗತ್ತಿಸಿ ಕಳುಹಿಸಿ ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವ್ಯವಸ್ಥಾಪಕರು (ತಾಂತ್ರಿಕ) ಇವರನ್ನು ಸದರಿ ಷರತ್ತು ಮತ್ತು ನಿಬಂದನೆಗೊಳಪಟ್ಟು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿಯೋಜಿಸಲು ಸಕ್ಷಮ ಪ್ರಾಧಿಕಾರವು ಅನುಮೋದನೆ ನೀಡಿರುತ್ತದೆಯೆಂದು ತಿಳಿಸಿರುತ್ತದೆ. ಜೊತೆಗೆ ಸದರಿಯವರು ವೇತನ ಶ್ರೇಣಿಯು ರೂ.74400-109600 ಆಗಿರುತ್ತದೆಯೆಂದು, ಸದರಿಯವರು ಬಿ.ಇ.ವಿಧ್ಯಾರ್ಹತೆಯನ್ನು ಹೊಂದಿರುತ್ತಾರೆಂದು, ನಿಯೋಜನೆ ಮೇಲೆ ನೇಮಕ ಮಾಡಿದ್ದಲ್ಲಿ ಸಂಸ್ಥೆಯ ಸಿಬ್ಬಂದಿ ನಿಯಮಾವಳಿ ಮತ್ತು ಕಾಂಡಕ್ಟ್ ರೆಗ್ಯೂಲೇಷನ್ ಅನ್ವಯ ಸೇವೆಯಿಂದ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತದೆ.

ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವ್ಯವಸ್ಥಾಪಕ (ತಾಂತ್ರಿಕ) ಇವರ ಸೇವೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಗುತ್ತಿಗೆ ಮೇಲೆ ಪಡೆಯುವ ಬಗ್ಗೆ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ)ನಿಯಮಗಳು, 1977 ರ ನಿಯಮ 15 (i) (ಬಿ) (ii) ರನ್ವಯ ಪರಿಶೀಲಿಸಲಾಗಿದ್ದು. ಸದರಿ ನಿಯಮಗಳಲ್ಲಿ ತಾಂತ್ರಿಕ ವಿದ್ಯಾರ್ಹತೆಗೆ ಬೇಕಾಗುವ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.

ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವ್ಯವಸ್ಥಾಪಕರು (ತಾಂತ್ರಿಕ) ಇವರು ಕರ್ನಾಟಕ ರಾಜ್ ಹಣಕಾಸು ಸಂಸ್ಥೆ, ಬೆಂಗಳೂರು ಸೇವೆಗೆ ಸೇರಿದ ಅಧಿಕಾರಿಯಾಗಿರುತ್ತಾರೆ. ಇವರ ಮಾತೃ ಸಂಸ್ಥೆಯಲ್ಲಿನ ವೇತನ ಶ್ರೇಣಿಯು ಇಲಾಖೆಯಲ್ಲಿನ ಅಧೀಕ್ಷಕ ಇಂಜಿನಿಯರ್ ಹುದ್ದೆಯ ವೇತನ ಶ್ರೇಣಿಗೆ ಸಮನಾಂತರವಾಗಿರುತ್ತದೆ . ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವ್ಯವಸ್ಥಾಪಕರು ಇವರ ಗುತ್ತಿಗೆ ನೇಮಕಕ್ಕೆ ಸಂಬಂಧಿಸಿದಂತೆ ವೇತನ ಮತ್ತು ಇತರೆ ಭತ್ಯೆ ಹಾಗೂ ಸೇವಾ ಷರತ್ತುಗಳನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ(ಸಾಉಮಾ) 24 ಎಂಇಎ 2002, ದಿನಾಂಕ. 05-03-2002 ರನ್ವಯ ಒಪ್ಪಂದ ಮಾಡಿಕೊಂಡು ಗುತ್ತಿಗೆ ಆಧಾರದ ಮೇಲೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ , ಬಳ್ಳಾರಿ, ಇಲ್ಲಿ ಖಾಲಿ ಇರುವ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ನೇಮಿಸಲು ಸರ್ಕಾರವು ನಿರ್ಧರಿಸಿದೆ, ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಗ್ರಾಅಪ 268 ಸೇಶಿಕಾ 2019, ಬೆಂಗಳೂರು, ದಿನಾಂಕ:30.12.2019

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 15(1)(ಬಿ)(ii) ರನ್ವಯ ಈ ಆದೇಶಕ್ಕೆ ಲಗತ್ತಿಸಿರುವ ಷರತ್ತು ಮತ್ತು ನಿಬಂದನೆಗಳಿಗೆ ಒಳಪಟ್ಟು ಶ್ರೀ ಅಡಿವೆಪ್ಪನವರ ವೀರಪ್ಪ, ಹಿರಿಯ ವ್ಯವಸ್ಥಾಪಕರು(ತಾಂತ್ರಿಕ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,ಬೆಂಗಳೂರು ಇವರನ್ನು ಗುತ್ತಿಗೆ ಆಧಾರದ ಮೇಲೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿಯವರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇಲ್ಲಿ ಖಾಲಿ ಇರುವ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ನೇಮಿಸಿದೆ.

ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಗುತ್ತಿಗೆ ಅವಧಿ ಮುಂದುವರಿಕೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಆದೇಶ ಸ್ವೀಕೃತವಾಗದಿದ್ದಲ್ಲಿ ಕೂಡಲೇ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

30/12/2019
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕಪತ್ರ 1 & 2) / (ಆಡಿಟ್)
2. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿ&ಆ),ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೆ.ಎಸ್.ಎಫ್.ಸಿ.ಭವನ,ನಂ.1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
4. ಮುಖ್ಯ ಕಾರ್ಯಾಚರಣೆ ಅಧಿಕಾರಿ. ಕೆ.ಆರ್.ಆರ್.ಡಿ.ಎ. ಬೆಂಗಳೂರು.
5. ಸಂಬಂಧಪಟ್ಟ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ಯವರಿಗೆ.

2. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ(ಪಂ.ರಾಜ್)/
3. ಹೆಚ್ಚುವರಿ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ
4. ಸಹಾಯಕರಿಗೆ.
5. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ
6. ಪ್ರಕಟಿಸುವ ಸಲುವಾಗಿ.
7. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.